# ಮುಖ್ಯ ಚುನಾವಣಾಧಿಕಾರಿಯವರ ಕಛೇರಿ–ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001.

ಸಂಖ್ಯೆ: ಸಿಆಸುಇ/23/SVEEP/2022 ದಿನಾಂಕ: 03.01.2023

ಗೆ,

1. ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಬಿ.ಬಿ.ಎಂ.ಪಿ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಅಪರ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಅಪರ ಆಯುಕ್ತರು, ಬಿ.ಬಿ.ಎಂ.ಪಿ (ಕೇಂದ್ರ/ಉತ್ತರ/ದಕ್ಷಿಣ).
5. ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ.
6. ರಾಜ್ಯದ ಎಲ್ಲಾ ಜಿಲ್ಲಾ SVEEP ನೋಡಲ್ ಅಧಿಕಾರಿಗಳು.

ಮಾನ್ಯರೆ,

**ವಿಷಯ:–** ಮತದಾರ ಜಾಗೃತ ಸಂಘಗಳ (Voter Awareness Forum) ಮುಖೇನ ಚುನಾವಣಾ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು

**ಉಲ್ಲೇಖ:–** ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ 417/ECI/LET/FUNC/SVEEP-3/EL/VAF/2018 ದಿನಾಂಕ:19.12.2018.

*******

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಚುನಾವಣಾ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮತದಾರ ಜಾಗೃತ ಸಂಘಗಳು (Voter Awareness Forum) ಬಹು ಮುಖ್ಯ ಪಾತ್ರವಹಿಸುತ್ತವೆ. ಮುಂಬರುವ 2023ರ ಕರ್ನಾಟಕ ಸಾರ್ವತ್ರಿಕ ಚುನಾವಣೆ ಸಂಬಂಧ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರ ಜಾಗೃತ ಸಂಘಗಳ (Voter Awareness Forum) ಮುಖೇನ ಪರಿಣಾಮಕಾರಿಯಾಗಿ ಚುನಾವಣಾ ಜಾಗೃತಿಯನ್ನು ಮೂಡಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಕೆಳಗಿನ ಅಗತ್ಯ ಕ್ರಮ ಹಾಗು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ.

1. ತಮ್ಮ ಜಿಲ್ಲೆಗಳಲ್ಲಿರುವ ಎಲ್ಲಾ ಸರ್ಕಾರಿ / ಅರೆ ಸರ್ಕಾರಿ ಮತ್ತು ಖಾಸಗಿ ಕಛೇರಿಗಳಿಗೆ ಮತದಾರ ಜಾಗೃತಿ ಸಂಘಗಳನ್ನು (Voter Awareness Forum) ಕಡ್ಡಾಯವಾಗಿ ಸ್ಥಾಪಿಸುವಂತೆ ಸೂಚಿಸುವುದು.
2. "ರಾಷ್ಟ್ರೀಯ ಮತದಾರ ದಿನಾಚರಣೆ–2023" ರ ದಿನದ ಅಂಗವಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಲು ಎಲ್ಲಾ ಮತದಾರ ಜಾಗೃತಿ ಸಂಘಗಳಿಗೆ ಸೂಚಿಸುವುದು ಹಾಗೂ ಪ್ರತಿಜ್ಞಾ ವಿಧಿ ಪ್ರತಿಗಳನ್ನು ಹಂಚಿಕೆ ಮಾಡುವುದು.
3. ಮತದಾರ ಜಾಗೃತಿ ಸಂಘಗಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುವುದು.
4. ಮತದಾರ ಜಾಗೃತಿ ಸಂಘಗಳ ಹಂತದಲ್ಲಿ ಚುನಾವಣಾ ಸಂಬಂಧ ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
5. ವಿದ್ಯುನ್ಮಾನ ಮತಯಂತ್ರದ (EVM/VVPAT) ಪ್ರಾತ್ಯಕ್ಷಿಕೆ ಇತ್ಯಾದಿ ಮಾಹಿತಿ ಜಾಗೃತಿಯನ್ನು ಪ್ರತಿ ಸಂಘಗಳ ಹಂತದಲ್ಲಿ ಹಮ್ಮಿಕೊಳ್ಳುವುದು.
6. ಜಿಲ್ಲಾ ಮಟ್ಟದಲ್ಲಿ ಗೂಗಲ್ ಮೀಟ್ ಮುಖೇನ ಚುನಾವಣಾ ಜಾಗೃತಿ ವಿಡಿಯೋ ಸಂವಾದ ಸಭೆಯನ್ನು ಆಯೋಜಿಸಿ ವಿಡಿಯೋ ಸಂವಾದದ ಲಿಂಕ್ ಮತ್ತು ದಿನಾಂಕದ ವಿವರವನ್ನು ಒಂದು ದಿನ ಮುಂಚಿತವಾಗಿ ಈ ಕಛೇರಿಗೆ ತಿಳಿಸುವುದು.

7. ಹೆಚ್ಚು ಹೆಚ್ಚು ಮತದಾರ ಜಾಗೃತಿ ಸಂಘಗಳನ್ನು ಸ್ಥಾಪಿಸಲು ಕ್ರಮವಹಿಸುವುದು.
8. ಮತದಾರ ಜಾಗೃತಿ ಸಂಘ ಕೈಪಿಡಿಯನ್ನು ಸಂಘಗಳಿಗೆ ನೀಡುವುದು.
9. ಮುಖ್ಯವಾಗಿ ಮತದಾರ ಜಾಗೃತಿ ಸಂಘಗಳ Whatsapp ಗುಂಪುಗಳನ್ನು ರಚಿಸುವುದು. ಹಾಗೂ ಸದರಿ ಗುಪಿನ ಸದಸ್ಯರ ಸಂಖ್ಯೆ ಮತ್ತು ಗುಂಪಿನ ಅಡ್ಮಿನ್‌ನ ಪೂರ್ಣ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕೈಗೊಂಡ ಕ್ರಮಗಳ ಕುರಿತ ವರದಿಯನ್ನು ನೀಡಲು ಕೋರಿದೆ.

4.1.2023

(ಪಿ.ಎಸ್.ವಸ್ತ್ರದ್) ಭಾ.ಆ.ಸೇ(ನಿ)

**ರಾಜ್ಯ ನೋಡಲ್ ಅಧಿಕಾರಿಗಳು (SVEEP)**